ಅಸಲ ದಾವಾ ಸಂಖ್ಯೆ: **111/2014**

ಪಿ.ಡಬ್ಲೂ.: **01**

<u>ಸಾಕ್ಷಿಯನ್ನು ಇಂದು ದಿನಾಂಕ: **06.12.2018** ರಂದು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎ ಎಂ ಜಿ ವಕೀಲರಿಂದ</u>

ನಮ್ಮ ಮನೆತನಕ್ಕೆ ಬಂದ ಜಮೀನಿನಲ್ಲಿ ಹಳ್ಳ**,** ಒಡ್ಡು ಮತ್ತು ಚೆಕ್ ಡ್ಯಾಂ ಇರುವ ಕಾರಣ **30** ಗುಂಟೆ ಜಮೀನನ್ನು ಪೋಟ್ ಖರಾಬು ಅಂತಾ ದಾಖಲು ಮಾಡಿರುತ್ತಾರೆ ಅಂದರೆ ಸರಿಯಲ್ಲ. **1** ಮತ್ತು **5** ನೇ ಪ್ರತಿವಾದಿಯರು ಶಾಮೀಲಾಗಿ ಮೋಜನಿಯನ್ನು ಮಾಡಿಸಿರುತ್ತಾರೆ ಅಂತಾ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ತಂದೆಯವರ ಕಾಲದಲ್ಲಿಯೇ ಮೋಜನಿಯಾಗಿರುತ್ತದೆ ಅಂತಾ ಸ್ವತಃ ನುಡಿಯುತ್ತಾರೆ. ಆ ಬಗ್ಗೆ ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸ.ನಂ.**405** ಮತ್ತು **403** ರ ಜಮೀನುಗಳನ್ನು ಕಂದಾಯ ಇಲಾಖೆಯವರು ಕಾನೂನುಬದ್ಧವಾಗಿ ಸರ್ವೆ ಮಾಡಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಸದರಿ ಮೋಜನಿ ವ್ಯವಹಾರವು ಕಾನೂನುಬದ್ಧವಾಗಿದೆ ಎಂದು ನನಗೆ ಗೊತ್ತಿದ್ದ ಕಾರಣ ನಾನು ಸೂಕ್ತ ಪ್ರಾಧಿಕಾರದಲ್ಲಿ ಪ್ರಶ್ನಿಸಿರುವುದಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಯರನ್ನು ಹೆದರಿಸಬೇಕೆಂದು ಈ ರೀತಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ಸ.ನಂ.**405** ರಲ್ಲಿ ಸರ್ವೆ ಆದ ನಂತರ ಆ ಜಮೀನಿನ ನಿಜ ಸ್ಥಿತಿ ತಿಳಿದುಬಂದಿರುತ್ತದೆ ಅಂದರೆ ಸರಿಯಲ್ಲ. ಮೋಜನಿ ಆದ ನಂತರ ಸ.ನಂ.**405** ರಲ್ಲಿ **4** ಪಟ್ಟಿಗಳಾಗಿವೆ ಅಂದರೆ ಸರಿಯಲ್ಲ. ಇದೇ ಸರ್ವೆ ನಂಬರಿನಲ್ಲಿ ಇನ್ನುಳಿದ ಜಮೀನುಗಳ ಮಾಲೀಕರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ನನಗೆ ಗೊತ್ತಿಲ್ಲ. ಸ.ನಂ.**405/1** ನನಗೆ ಸೇರಿದ ಜಮೀನು ಅಂದರೆ ಸರಿ**,** ಅದು **10** ಎಕರೆ ಇದೆ ಅಂದರೆ ಸರಿ**,** ಅದರಲ್ಲಿ **30** ಗುಂಟೆ ಪೋಟ್ ಖರಾಬು ಇದೆ ಅಂದರೆ ಸರಿಯಲ್ಲ. ಸದರಿ **30** ಗುಂಟೆ ಜಮೀನು ಪೋಟ್ ಖರಾಬು ಎಂದು ಕಳೆದರೆ**,** ನನಗೆ **09** ಎಕರೆ **10** ಗುಂಟೆ ಜಮೀನು ಮಾತ್ರ ಉಳಿಯುತ್ತದೆ ಅಂದರೆ ಸರಿಯಲ್ಲ.

ಸ.ನಂ.**405/2** ರಲ್ಲಿ **09** ಎಕರೆ **06** ಗುಂಟೆ ಜಮೀನು ಇದೆ ಅಂದರೆ ಇರಬಹುದು. ಸ.ನಂ.**405/3** ರಲ್ಲಿ **04** ಎಕರೆ **04** ಎಕರೆ ಜಮೀನು ಇದೆ ಅಂದರೆ**,** ಸಾಕ್ಷಿಯು **03** ಎಕರೆ ಜಮೀನು ಮಾತ್ರ ಇರುತ್ತದೆ ಅಂತಾ ನುಡಿಯುತ್ತಾರೆ**,** ಅದರಲ್ಲಿ **01** ಎಕರೆ ಜಮೀನು ಪೋಟು ಖರಾಬು ಜಮೀನು ಇದೆ ಅಂದರೆ ಸರಿಯಲ್ಲ. ಸ.ನಂ.**405/4** ರಲ್ಲಿ **02** ಎಕರೆ ಜಮೀನಿನಲ್ಲಿ **15** ಗುಂಟೆ ಜಮೀನು ಪೋಟ್ ಖರಾಬು ಇದೆ ಅಂದರೆ ಸರಿಯಲ್ಲ. ಈ ಎಲ್ಲಾ ಜಮೀನುಗಳನ್ನು ಒಟ್ಟುಗೂಡಿಸಿದರೆ**,** ಪ್ರತಿವಾದಿಯರ ಮನೆತನಕ್ಕೆ ಒಟ್ಟು **15** ಎಕರೆ **11** ಗುಂಟೆ ಜಮೀನು ಬರುತ್ತದೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು **14** ಎಕರೆ **06** ಗುಂಟೆ ಜಮೀನು ಮಾತ್ರ ಪ್ರತಿವಾದಿಯರ ಮನೆತನಕ್ಕೆ ಬರುತ್ತದೆ ಅಂತಾ ನುಡಿಯುತ್ತಾರೆ. ಪ್ರತಿವಾದಿಯರ ಮನೆತನದವರಿಗೆ **14** ಎಕರೆ **06** ಗುಂಟೆ ಜಮೀನನ್ನು ಹೊರತುಪಡಿಸಿ**,** ಪೋಟ್ ಖರಾಬ ಹೊಂದಿರುವ ಯಾವುದೇ ಜಮೀನು ಇಲ್ಲ. **15** ಎಕರೆ **11** ಗುಂಟೆ ಜಮೀನಿನಲ್ಲಿ **15** ಗುಂಟೆ ಜಮೀನು ಪೋಟ್ ಖರಾಬು ಜಮೀನು ಇದೆ ಅಂರದೆ ಸರಿಯಲ್ಲ. ನನ್ನ ಸ್ವಾಧೀನದಲ್ಲಿ **10** ಎಕರೆ ಜಮೀನು ಇರುವುದರಿಂದ ನನಗೆ ಯಾವುದೇ ರೀತಿಯ ಹಾನಿಯುಂಟಾಗಿರುವುದಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಯ ನನ್ನ ಮಾಲೀಕತ್ವಕ್ಕಾಗಲೀ**,** ಸಾಗುವಳಿಗಾಗಲೀ ಪ್ರತಿವಾದಿಯರು ಅಡೆತಡೆ ಮಾಡಿಲ್ಲ ಅಂದರೆ ಸರಿ. ಪ್ರತಿವಾದಿಯರು ನನಗೆ ಜೀವ ಬೆದರಿಕೆ ಹಾಕಿದ್ದಾರೆ ಎಂದು ನಾನು ಹೇಳಿರುವುದಿಲ್ಲ. ಪಹಣಿಪತ್ರಿಕೆಯಲ್ಲಿರುವ ಅಂಕಿ–ಸಂಖ್ಯೆಗಳು ನನಗೆ ತಿಳಿಯದ ಕಾರಣ ಈ ರೀತಿ ದಾವೆ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ನಾನು ನನ್ನ ವಾದಪತ್ರದಲ್ಲಿ ಕೇಳಿರುವಂತೆ **25** ಸಾವಿರ ರೂ.ಗಳ ಪರಿಹಾರವನ್ನು ನಾನು ಕೇಳಿರುವುದೇ ಇಲ್ಲ. **1** ಮತ್ತು **2** ನೇ ಪ್ರತಿವಾದಿಯರ ನಡುವೆ ಆಗಿರುವ ವ್ಯವಹಾರ ನನಗೆ ಬಂಧನಕಾರಿಯಾಗಿದೆ ಅಂದರೆ ಸರಿಯಲ್ಲ. ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲದಲ್ಲಿ ಉಕ್ತ ಲೇಖನ ನೀಡಿ ಗಣಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ
ಜೆ.ಎಮ್.ಎಫ್.ಸಿ. ಸಿಂದಗಿ.